ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 78
2. ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್
3. ಉತ್ತರಿಸಬೇಕಾದ ದಿನಾಂಕ : 15.02.2022
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಎ.ಪಿ.ಎಂ.ಸಿ ಕಾಯ್ದೆಯ ತಿದ್ದುಪಡಿಯನ್ನು ಹಿಂಪಡೆದುಕೊಳ್ಳುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;	ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ರಾಜ್ಯದ ಕಾಯ್ದೆಯಾಗಿದ್ದು, ಅದರ ಅಡಿ ನೀತಿ ನಿಯಮಗಳನ್ನು ಮಾಡುವ ಪೂರ್ಣ ಅಧಿಕಾರ ರಾಜ್ಯಕ್ಕೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ಸದರಿ ಅಧಿನಿಯಮ ಕಲಂ 8(2), ಕಲಂ 8(3) ಮತ್ತು 117ಕ್ಕೆ ದಿನಾಂಕ:31.12.2020ರಂದು ತರಲಾಗಿರುವ ತಿದ್ದುಪಡಿಯನ್ನು ರಾಜ್ಯದ ರೈತರ ಹಿತಾಸಕ್ತಿಗಳಿಗೆ ಅನುಗುಣವಾಗಿ ಪರಿಶೀಲಿಸಲಾಗುವುದು. ಸದರಿ ತಿದ್ದುಪಡಿಯ ಅನುಕೂಲ ಹಾಗೂ ಅನಾನುಕೂಲಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು.
(ಆ)	ರಾಜ್ಯದಲ್ಲಿರುವ ಎರಡೆರಡು ಎ.ಪಿ.ಎಂ.ಸಿ. ಗಳನ್ನು ವಿಲೀನಗೊಳಿಸುವ ನಿರ್ಧಾರ ಸರ್ಕಾರದ ಮುಂದಿದೆಯೇ? (ಈ ಕುರಿತಂತೆ ವಿಸ್ತೃತವಾದ ಮಾಹಿತಿ ನೀಡುವುದು)	ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 144ರಲ್ಲಿ ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ಯಾವುದೇ ಕೃಷಿ ಉತ್ಪನ್ನದ ಮಾರುಕಟ್ಟೆ ವ್ಯವಹಾರವನ್ನು ದಕ್ಷ ರೀತಿಯಲ್ಲಿ ನಿಯಂತ್ರಿಸುವುದಕ್ಕಾಗಿ ಎರಡು ಅಥವಾ ಹೆಚ್ಚು ಮಾರುಕಟ್ಟೆ ಸಮಿತಿಗಳು ವಿಲೀನಗೊಳ್ಳುವುದು ಅವಶ್ಯವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಆಗ ರಾಜ್ಯ ಸರ್ಕಾರವು ಸಂಬಂಧಪಟ್ಟ ಮಾರುಕಟ್ಟೆ ಸಮಿತಿಗಳೊಡನೆ ಸಮಾಲೋಚಿಸಿ ಅಂತಹ ಮಾರುಕಟ್ಟೆ ಸಮಿತಿಗಳನ್ನು ವಿಲೀನಗೊಳಿಸಲು ಅಧಿಕಾರ ಹೊಂದಿರುತ್ತದೆ. ಆದರೆ, ರಾಜ್ಯದಲ್ಲಿನ ಎರಡೆರಡು ಎಪಿಎಂಸಿ ಗಳನ್ನು ವಿಲೀನಗೊಳಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಸಿಒ 24 ಎಂಆರ್‌ಇ 2022

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು.